

# ಚೆಲುವಿನ ಕುಂಡ ಜಕರಂಡ

**ಮೈತುಂಬ ಹೂ ಮುಡಿಯುವ ಸುಂದರ ಮರ ಜಕರಂಡ, ನೆಲಕ್ಕೂ ಹೂವಿನ ಹಾಸಿಗೆಯನ್ನು ಹರಡುತ್ತದೆ. ಚೆಲುವೆಲ್ಲ ತನ್ನದೆನ್ನುವ ಈ ಅಲಂಕಾರಿಕ ವೃಕ್ಷ, ಔಷಧೀಯ ಗುಣಗಳ ಕಾರಣದಿಂದಲೂ ಮುಖ್ಯವಾದುದು.**

■ ಡಾ. ಮಹದೇಶ್ವರ ಸ್ವಾಮಿ

ಶಿಶಿರ ಋತುವಿನ ಅಂತ್ಯದಲ್ಲಿ ಅನೇಕ ಪತನಶೀಲ **(deciduous)** ಮರಗಳಲ್ಲಿ ಗಮನಾರ್ಹ ಬದಲಾವಣೆಗಳು ಉಂಟಾಗುತ್ತವೆ. ಅವು ಹಳೆಯ ಎಲೆಗಳನ್ನು ಉದುರಿಸಿ ಹೊಸ ಚಿಗುರಿನೊಂದಿಗೆ ನವಜೀವನ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತವೆ. ಕೆಲವೊಂದು ಮರಗಳು ಬರಿಯ ಕೊಂಬೆಗಳ ಶಾಖೆಗಳ ಮೇಲೆಯೇ ಹೂ ಬಿಟ್ಟು ಹೊಸ ಜೀವನ ಚಕ್ರಕ್ಕೆ ಕಾಲಿಡುತ್ತವೆ. ಈ ರೀತಿಯ ಮರಗಳಲ್ಲಿ ಮುಖ್ಯವಾದುದು ಜಕರಂಡ.

ನೋಡನೋಡುತ್ತಿದ್ದ ಹಾಗೆ ತುತ್ತೂರಿ ಆಕಾರದ ನೇರಳೆ ಬಣ್ಣದ ಹೂವುಗಳ ಸಮೂಹಗಳಿಂದ, ಹೂಗೊಂಚಲುಗಳು ಸಂಪೂರ್ಣ ಮೇಲಾವರಣವನ್ನು **(canopy)** ಆವರಿಸಿ, ಅತ್ಯಂತ ಆಕರ್ಷಕವಾದ ಮರವಾಗಿ ಮಾರ್ಪಾಡಾಗಿ ಕಂಗೊಳಿಸುತ್ತದೆ. ತಾನಾಗಿಯೇ ಬಿದ್ದ ಹೂವುಗಳು ಮರದ ಕೆಳಗೆ ಹಾಸುಗಂಬಳಿಯನ್ನು ರಚಿಸುವ ದೃಶ್ಯ ಮನಮೋಹಕ.

ಜಕರಂಡ ಮರವು ಮೈಸೂರು, ಬೆಂಗಳೂರು ಸೇರಿದಂತೆ ಕರ್ನಾಟಕದ ಅನೇಕ ನಗರ–ಪಟ್ಟಣಗಳಲ್ಲಿ ಹಲವು ದಶಕಗಳಿಂದ ಭೂದೃಶ್ಯದ **(landscape)** ಭಾಗವಾಗಿದೆ. ಈ ಮರ ದಕ್ಷಿಣ ಬೊಲಿವಿಯಾ ಮತ್ತು ಅರ್ಜೆಂಟೀನಾ ಮೂಲದ್ದು. ಆದರೆ ಉಷ್ಣವಲಯದಲ್ಲಿ ವ್ಯಾಪಕವಾಗಿ ಬೆಳೆಸಲಾಗುತ್ತಿದೆ. ಇದನ್ನು ‘ಬ್ರೆಜಿಲಿಯನ್ ರೋಸ್ ವುಡ್’, ‘ಟ್ರಂಪೆಟ್ ಟ್ರೀ’, ‘ಬ್ಲ್ಯಾಕ್ ಪೌಯಿ’, ‘ಗ್ರೀನ್ ಎಬೊನಿ’ ಹಾಗೂ ಹಿಂದಿಯಲ್ಲಿ ‘ನೀಲಿ ಜಕರಂಡ’, ‘ನೀಲಿ ಗುಲ್‌ಮೊಹರ್’ ಮುಂತಾದ ಸಾಮಾನ್ಯ ಹೆಸರುಗಳಿಂದಲೂ ಕರೆಯಲಾಗುತ್ತದೆ. ಸಸ್ಯಶಾಸ್ತ್ರೀಯ ಹೆಸರು ‘ಜಕರಂಡ ಮಿಮೋಸಿಫೋಲಿಯಾ’ (ಬಿಗ್ನೋನಿಯೇಸಿ ಕುಟುಂಬ).

‘ಜಕರಂಡ’ ಎಂಬ ಸಾಮಾನ್ಯ ಹೆಸರು **(genus name)** ‘ಜಕರನಾ’ ಎಂಬ ಪದದ ನವ–ಲ್ಯಾಟಿನ್ ಆವೃತ್ತಿಯಾಗಿದೆ. ಇದು ಸ್ಥಳೀಯ ದಕ್ಷಿಣ ಅಮೆರಿಕದ ‘ಟುಪಿ’ ಸಮುದಾಯದವರು ಮಾತನಾಡುವ ಗೌರಾನಿ ಭಾಷೆಯ ಪದವಾಗಿದ್ದು, ಅದರ ಅರ್ಥ